# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜನಶ್ರೀ ಬೀಮಾ ಯೋಜನೆಯನ್ನು ಆಮ್ ಆದ್ಮಿ ಬೀಮಾ ಯೋಜನ ವಿಲೀನಗೊಳಿಸಿ ಕಂದಾಯ ಇಲಾಖೆಯ ಮುಖಾಂತರ ಅನುಷ್ಠಾನಗೊಳಿ

ಓದಲಾಗಿದೆ: 1. ಆರ್ಥಿಕ ಇಲಾಖೆ ಭಾರತ ಸರ್ಕಾರ ಇವರ ಪತ್ರ
ಸಂಖ್ಯೆ:Do.No-I13011/6/2009 Ius-111, ದಿನಾಂಕ:14/12/2012.
2. ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 25 ಡಿಎಸ್‌ಪಿ 2008,
ದಿನಾಂಕ: 31-03-2008
3. ಸರ್ಕಾರಿ ಆದೇಶ ಸಂಖ್ಯೆ: ಕಂಇ 87 ಎಲ್‌ಇಟಿ 201,ದಿನಾಂಕ: 05-11-2012

ಪ್ರಸ್ತಾವನೆ:

ಭಾರತ ಸರ್ಕಾರವು 45 ವಿವಿಧ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಬಡತನ ರೇಖೆಗಿಂತ ಕೆಳಗಿರುವ ಅಥವಾ ಬಡತನ ರೇಖೆಯ ಅಂಚಿನಲ್ಲಿರುವ ಕುಟುಂಬಗಳಿಗೆ ಜೀವ ವಿಮೆ ಒದಗಿಸುವ ದೃಷ್ಟಿಯಿಂದ ಜನಶ್ರೀ ಬೀಮಾ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಭೂ ರಹಿತ ಕುಟುಂಬಗಳಿಗೆ ಸಂಕಷ್ಟದ ಪರಿಸ್ಥಿತಿಯಲ್ಲಿ ಆರ್ಥಿಕ ನೆರವು ಒದಗಿಸುವ ದೃಷ್ಟಿಯಿಂದ ಆಮ್ ಆದ್ಮಿ ಬೀಮಾ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಎರಡೂ ಯೋಜನೆಗಳಡಿ ಲಾಭಗಳು ಕೆಳಕಂಡತಿರುತ್ತದೆ.

1.ವಿಮೆದಾರ ನೈಸರ್ಗಿಕ ಮರಣ ಹೊಂದಿದ ಸಂದರ್ಭದಲ್ಲಿ ರೂ.30,000/-
2.ವಿಮೆದಾರ ಅಪಘಾತದಿಂದ ಮರಣ ಹೊಂದಿದ ಸಂದರ್ಭದಲ್ಲಿ ರೂ.75,000/-
3.ವಿಮೆದಾರ ಭಾಗಶಃ ಅಂಗವಿಕಲನಾದಲ್ಲಿ ರೂ.37,500/-
4.ವಿಮೆದಾರ ಸಂಪೂರ್ಣ ಅಂಗವಿಕಲನಾದಲ್ಲಿ ರೂ.75000/-
5.ಕುಟುಂಬದಲ್ಲಿ ಎರಡು ಮಕ್ಕಳಿಗೆ ಪ್ರತಿ ಮಾಹೆ ರೂ.100 ರ ವಿಧ್ಯಾರ್ಥಿ ವೇತನ.

ವಿಮೆಯ ಪ್ರೀಮಿಯಂ ವೇತನ ಮೊತ್ತವಾದ ರೂ.200ನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಶೇಕಡಾ 50 ರಷ್ಟು ಭರಿಸಬೇಕಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ(1) ರನ್ವಯ, ಜನಶ್ರೀ ಬೀಮಾ ಯೋಜನೆ ಹಾಗೂ ಆಮ್ ಆದ್ಮಿ ಬೀಮಾ ಯೋಜನೆಯ ಸ್ವರೂಪ ಹಾಗೂ ಗುಣಲಕ್ಷಣಗಳು ಒಂದೇ ರೀತಿಯಾದುದರಿಂದ ಎರಡೂ ಯೋಜನೆಗಳನ್ನು ವಿಲೀನಗೊಳಿಸಿ "ಆಮ್ ಆದ್ಮಿ ಬೀಮಾ ಯೋಜನೆ" ಎಂದು ಮರುನಾಮೀಕರಿಸಲು ಭಾರತ ಸರ್ಕಾರ ತೀರ್ಮಾನಿಸಿದೆ.

ಮೇಲೆ ಓದಲಾದ ಉಲ್ಲೇಖ (3) ರನ್ವಯ, ಜನಶ್ರೀ ಬೀಮಾ ಯೋಜನೆಯನ್ನು ಕಾರ್ಮಿಕ ಇಲಾಖೆಯು 2012-13 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ಆದೇಶಿಸಿದ್ದು, ಸದರಿ ಯೋಜನೆಯಡಿ ಯಾವುದೇ ಫಲಾನುಭವಿಗಳನ್ನು ಗುರುತಿಸುವುದಿಲ್ಲ.

(119)